**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಕೆ.ಎ ತಿಪ್ಪೇಸ್ವಾಮಿ, ಶ್ರೀ ಕೆ.ಟಿ ಶ್ರೀಕಂಠೇಗೌಡ, ಶ್ರೀ ಚೌಡರೆಡ್ಡಿ ಆರ್ ತೂಪಲ್ಲಿ, ಶ್ರೀ ಎನ್. ಅಪ್ಪಾಜಿಗೌಡ ಇವರುಗಳಿಂದ ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

## ಸೂಚನಾ ವಿಷಯ

**ಆರ್ಥಿಕ ಇಲಾಖೆಯ ಆದೇಶದ ಅನ್ವಯ ಲೋಕೋಪಯೋಗಿ ಇಲಾಖೆಯ 2018-19ನೇ ಸಾಲಿನ ಅಪೆಂಡಿಕ್ಸ್-ಇ ನಲ್ಲಿ ಲೆಕ್ಕಶೀರ್ಷಿಕೆ 5054 ಅಡಿ ಜಿಲ್ಲಾ ಮುಖ್ಯ ರಸ್ತೆ, ರಾಜ್ಯ ಹೆದ್ದಾರಿ ಮತ್ತು ಸೇತುವೆ ನಿರ್ಮಾಣ ಮತ್ತು ನವೀಕರಣ ಕಾಮಗಾರಿಗಳು ಸೇರ್ಪಡೆಯಾಗಿದ್ದು, ಬಹುತೇಕ ಈ ಎಲ್ಲಾ ಕಾಮಗಾರಿಗಳನ್ನು ತಡೆಹಿಡಿಯಲಾಗಿದೆ.**

**ಹೀಗೆ ತಡೆಯಲಾದ ಕೆಲವು ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕರಾರುಗಳು ಸಹಿಯಾಗಿದ್ದು, ಕಾಮಗಾರಿಗಳು ಮುಗಿಯುವ ಹಂತದಲ್ಲಿ ಇವೆ ಮತ್ತು ಇನ್ನು ಕೆಲವು ಪ್ರಕರಣಗಳಲ್ಲಿ ಟೆಂಡರ್ ಸ್ವೀಕರಿಸಿದ್ದು ಅವುಗಳು ಪರಿಶೀಲನೆ ಹಂತದಲ್ಲಿ ಇವೆ. ಈ ಹಿನ್ನೆಲೆಯಲ್ಲಿ, ಸಾರ್ವಜನಿಕ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಮತ್ತು ವಿಧಾನ ಮಂಡಲ ಉಭಯ ಸದನಗಳಿಂದ ಮಂಜೂರಾತಿ ಪಡೆದ ಆಯವ್ಯಯದ ಭಾಗವಾಗಿರುವ ಈ ಕಾಮಗಾರಿಗಳನ್ನು ವಿನಾಕಾರಣ ತಡೆ ಹಿಡಿದಿರುವುದರಿಂದ ಸಾರ್ವಜನಿಕರವನ್ನು ಈ ಮೂಲ ಸೌಕರ್ಯದಿಂದ ವಂಚಿತರನ್ನಾಗಿ ಮಾಡಿರುವುದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಯವರ ಗಮನ ಸೆಳೆಯಬಯಸುತ್ತೇವೆ.**

** ** **

2019-20ನೇ ಸಾಲಿನಲ್ಲಿ ಅಪೆಂಡಿಕ್ಸ್-ಇ ರಸ್ತೆ ಮತ್ತು ಸೇತುವೆಗಳು ಇದರಡಿ ರೂ.10225.86 ಕೋಟಿ ಅಂದಾಜು ಮೊತ್ತದ ಮುಂದುವರೆದ ಹಾಗೂ ಹೊಸ ಕಾಮಗಾರಿಗಳಿರುತ್ತವೆ. 2018-19ನೇ ಸಾಲಿನಲ್ಲಿ ಅಪೆಂಡಿಕ್ಸ್-ಇ ರಸ್ತೆ ಮತ್ತು ಸೇತುವೆ ಇದರಡಿ ವಿಧಾನಸಭಾ ಕ್ಷೇತ್ರವಾರು ಅನುಮೋದನೆ ನೀಡಲಾಗಿರುವ ಕಾಮಗಾರಿಗಳ ಮೊತ್ತದಲ್ಲಿ ಏರುಪೇರು ಕಂಡುಬಂದಿರುತ್ತವೆ. ಅಲ್ಲದೇ ಅಪೆಂಡಿಕ್ಸ್-ಇ ರಸ್ತೆ ಮತ್ತು ಸೇತುವೆಗಳು ಇದರಡಿ ಪ್ರಸ್ತುತ ರೂ.1800.00 ಕೋಟಿ ಮೊತ್ತದ ಬಾಕಿಬಿಲ್ಲುಗಳಿದ್ದು, ಈ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ.1479.20 ಕೋಟಿ ಅನುದಾನ ಒದಗಿಸಲಾಗಿದ್ದು, ಇದುವರೆವಿಗೆ ರೂ.818.49 ಕೋಟಿ ಬಿಡುಗಡೆ ಮಾಡಿದ್ದು, ರೂ.664.41 ಕೋಟಿ ಅನುದಾನ ಮಾತ್ರ ಬಿಡುಗಡೆಗೆ ಲಭ್ಯವಿರುತ್ತದೆ. ಆದುದರಿಂದ ಅನುಮೋದನೆ ನೀಡಲಾಗಿರುವ ಕಾಮಗಾರಿಗಳ ಪೈಕಿ ರೂ.4475.05 ಕೋಟಿ ಮೊತ್ತದ ಕಾಮಗಾರಿಗಳು ಇದುವರೆವಿಗೂ ಪ್ರಾರಂಭವಾಗದೇ ಇರುವುದರಿಂದ ಹಾಗೂ ಟೆಂಡರ್ ಹಂತದಲ್ಲಿರುವ ಕಾಮಗಾರಿಗಳನ್ನು ಮಾತ್ರ ತಾತ್ಕಾಲಿಕವಾಗಿ ತಡೆಹಿಡಿಯಲಾಗಿದ್ದು, ಪ್ರಾರಂಭವಾಗಿರುವ ಯಾವುದೇ ಕಾಮಗಾರಿಗಳನ್ನು ತಡೆಹಿಡಿದಿರುವುದಿಲ್ಲ. ತಡೆಹಿಡಿಯಲಾಗಿರುವ ಕಾಮಗಾರಿಗಳ ಮೊತ್ತದ ವಿವರ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಟೆಂಡರ್ ಹಂತದಲ್ಲಿರುವ ಕಾಮಗಾರಿಗಳ ಮೊತ್ತ | ಟೆಂಡರ್ ಆಹ್ವಾನಿಸಬೇಕಾಗಿರುವ ಕಾಮಗಾರಿಗಳ ಮೊತ್ತ | ಕಾರ್ಯಾದೇಶ ನೀಡಲು ಬಾಕಿ ಇರುವ ಕಾಮಗಾರಿಗಳ ಮೊತ್ತ | ಒಟ್ಟು |
|---|---|---|---|
| **266.22** | **1157.11** | **3051.72** | **4475.05** |

ತಡೆಹಿಡಿಯಲಾಗಿರುವ ಕಾಮಗಾರಿಗಳ ಅಗತ್ಯತೆಯನ್ನು ಪರಿಶೀಲಿಸಿ ಕಾಮಗಾರಿಗಳನ್ನು ಪ್ರಾರಂಭಿಸಲು ತಡೆಯಾಜ್ಞೆಯನ್ನು ತೆರವುಗೊಳಿಸಲು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ನಡೆಸಲಾಗುತ್ತದೆ.

(ಗೋವಿಂದ ಎಂ. ಕಾರಜೋಳ)
ಉಪಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು

**ಲೋಇ/428/ಐಎಫ್ಎ/2019**